# ಕೃಷಿ ವಿಶ್ವವಿದ್ಯಾಲಯ, ಧಾರವಾಡ

**ಕೃಷಿನಗರ, ಧಾರವಾಡ–580005, ಕರ್ನಾಟಕ**

**ಶಿಕ್ಷಣ ನಿರ್ದೇಶನಾಲಯ**

ದೂರವಾಣಿ (ಕಛೇರಿ): 0836–2214390 ಮಿಂಚಂಚೆ: doe@uasd.in, ಕೃವಿವಿ, ಧಾರವಾಡ ಜಾಲತಾಣ **www.uasd.edu**

**ಡಾ.ವಿ.ಆರ್.ಕಿರೇಸೂರ**
**ಶಿಕ್ಷಣ ನಿರ್ದೇಶಕರು**

ಸಂಖ್ಯೆ : ಕೃವಿವಿ/ಶಿನಿ/2024–25/2343
ದಿನಾಂಕ : 01–01–2025

## ಅಧಿಸೂಚನೆ

**ವಿಷಯ:** **ಕೃಷಿ ವಿಶ್ವವಿದ್ಯಾಲಯ ಧಾರವಾಡದಲ್ಲಿ "ಸಹಾಯಕ ಪ್ರಾಧ್ಯಾಪಕರ" (ತಾತ್ಕಾಲಿಕ/ಅರೆಕಾಲಿಕ) ಹುದ್ದೆಗಳ ನೇಮಕಾತಿ ಮಾಡುವ ಕುರಿತು.**

**ಉಲ್ಲೇಖ:**
1. ಕುಲಸಚಿವರು ಕೃವಿವಿ, ಧಾರವಾಡ ಇವರ ಪರವಾನಿಗೆ ಪತ್ರದ ಸಂಖ್ಯೆ. R/R2U/ Teaching/2024-25 Dtd. 27.08.2024.
2. ಕುಲಸಚಿವರು ಸುತ್ತೋಲೆ ಸಂಖ್ಯೆ. R/R1G/R-54/2024-25 Dtd.19.11.2024.
3. ಅಧಿಸೂಚನೆ ಸಂಖ್ಯೆ::ಕೃವಿವಿ/ಶಿನಿ/2024–25, ದಿ: 28.10.2024
4. Corrigendum No:UASD/DoE/R-CT8, dated: 08.11.2024
5. ಸರ್ಕಾರದ ಸುತ್ತೋಲೆ ಸಂ:ಸಿಆಸುಇ 06 ಸೆನೆನಿ 2024, ದಿನಾಂಕ 20.05.2024
6. ದಿನಾಂಕ 18.10.2024 ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು
7. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 46 ಶಾಸನ 2024, ಬೆಂಗಳೂರು, ದಿ: 16.08.2024
8. ಸರ್ಕಾರದ ಸುತ್ತೋಲೆ ಸಂಖ್ಯೆ: ಸೆಕಾ/ಮೀಜಾಕೋ–1/ಸಿಆರ್–3/2024–25, ದಿ:29.10.2024
9. ಕೃವಿವಿಗೆ ಸರ್ಕಾರದಿಂದ ದಿನಾಂಕ 07.11.2024 ರಂದು ಸ್ವೀಕೃತವಾದ ಇ–ಮೇಲ್

ಮೇಲಿನ ವಿಷಯ ಹಾಗೂ ಉಲ್ಲೇಖ–1ಕ್ಕೆ ಸಂಬಂಧಿಸಿದಂತೆ, ಕೃಷಿ ವಿಶ್ವವಿದ್ಯಾಲಯ, ಧಾರವಾಡದ ವಿವಿಧ ಮಹಾವಿದ್ಯಾಲಯಗಳ ವಿವಿಧ ವಿಭಾಗಗಳಲ್ಲಿ ಸಹಾಯಕ ಪ್ರಾಧ್ಯಾಪಕರು (ತಾತ್ಕಾಲಿಕ ಹಾಗೂ ಅರೆಕಾಲಿಕ) ಹುದ್ದೆಗಳನ್ನು ಒಂದು ವರ್ಷ ಅವಧಿಗೆ ಮೀರದಂತೆ ನೇಮಕ ಮಾಡಿಕೊಳ್ಳಲು ಅರ್ಹ ಹಾಗೂ ಆಸಕ್ತ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು ಹಾಗೂ ತದನಂತರ ದಿನಾಂಕ 12.11.2024 ರಿಂದ 30.11.2024ರ ವರೆಗೆ ಸಂದರ್ಶಗಳನ್ನು ಕೂಡಾ ನಡೆಸಲಾಗಿತ್ತು.

ಆದರೆ, ಸರ್ಕಾರದ ನಿರ್ದೇಶನದಂತೆ, ಕೃವಿವಿ, ಧಾರವಾಡದ ಎಲ್ಲ ಹೊರಗುತ್ತಿಗೆ ನೇಮಕಾತಿಯಲ್ಲಿ ಪ್ರಸ್ತುತ ಜಾರಿಯಲ್ಲಿರುವ ಮೀಸಲಾತಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಉಲ್ಲೇಖ 2ರನ್ವಯ ಸೂಚಿಸಲಾಗಿದೆ. ಹಾಗಾಗಿ, ಉಲ್ಲೇಖ 3ರನ್ವಯ ಹೊರಡಿಸಲಾದ ಅಧಿಸೂಚನೆ ಹಾಗೂ ತದನಂತರ ಉಲ್ಲೇಖ–4 ರನ್ವಯ ಹೊರಡಿಸಲಾದ ತಿದ್ದುಪಡಿ ಅಧಿಸೂಚನೆಗಳನ್ನು ಹಿಂಪಡೆಯಲಾಗಿದ್ದು ಅವುಗಳನ್ವಯ ಜಾರಿಗೊಳಿಸಲಾದ ನೇಮಕಾತಿ ಪ್ರಕ್ರಿಯೆಯನ್ನು ಈ ಮೂಲಕ ರದ್ದುಗೊಳಿಸಲಾಗಿದೆ.

ಮುಂದುವರೆದು ಪ್ರಸ್ತುತ ಅಧಿಸೂಚನೆಯ ಮೂಲಕ ಕೃಷಿ ವಿಶ್ವವಿದ್ಯಾಲಯ, ಧಾರವಾಡದ ವಿವಿಧ ಮಹಾವಿದ್ಯಾಲಯಗಳ ವಿವಿಧ ವಿಭಾಗಗಳಲ್ಲಿ ಸಹಾಯಕ ಪ್ರಾಧ್ಯಾಪಕರು (ತಾತ್ಕಾಲಿಕ ಹಾಗೂ ಅರೆಕಾಲಿಕ) ಹುದ್ದೆಗಳನ್ನು ಒಂದು ವರ್ಷ ಅವಧಿಗೆ ಮೀರದಂತೆ ಅನುಬಂಧ–1 ರಲ್ಲಿ ಸೂಚಿಸಿದಂತೆ **(ರೋಸ್ಟರ ನಿಯಮಾನುಸಾರ)** ನೇಮಕ ಮಾಡಿಕೊಳ್ಳಲು ಅರ್ಹ ಹಾಗೂ ಆಸಕ್ತ ಅಭ್ಯರ್ಥಿಗಳಿಂದ ಅನುಬಂಧ–2ರಲ್ಲಿ ಸೂಚಿಸಿದಂತೆ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಮತ್ತೊಮ್ಮೆ ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳು ಅನುಬಂಧ–3ರಲ್ಲಿ ನಮೂದಿಸಿರುವ ವಿಷಯವಾರು ಸಂದರ್ಶನ ದಿನಾಂಕ ಹಾಗೂ ಸಮಯಕ್ಕೆ ಸರಿಯಾಗಿ ಕುಲಸಚಿವರ ಸಂದರ್ಶನ ಕೊಠಡಿ, ಕೃವಿವಿ, ಧಾರವಾಡದಲ್ಲಿ ಹಾಜರಾಗಲು ಈ ಮೂಲಕ ಕೋರಲಾಗಿದೆ.

ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾಲಯದ ಜಾಲತಾಣವನ್ನು (www.uasd.edu) ಸಂಪರ್ಕಿಸಲು ಸೂಚಿಸಲಾಗಿದೆ.

01/01/25
ಶಿಕ್ಷಣ ನಿರ್ದೇಶಕರು
**ಶಿಕ್ಷಣ ನಿರ್ದೇಶಕರು**
**ಕೃ.ವಿ.ವಿ. ಧಾರವಾಡ**

**ಪ್ರತಿಯನ್ನು:**

1 ಕುಲಸಚಿವರು / ಹಣಕಾಸು ನಿಯಂತ್ರಣಾಧಿಕಾರಿಗಳು / ಆಡಳಿತಾಧಿಕಾರಿಗಳು, ಕೃಷಿ ವಿಶ್ವವಿದ್ಯಾಲಯ, ಧಾರವಾಡ

2 ಸಂಶೋಧನಾ ನಿರ್ದೇಶಕರು/ವಿಶೇಷ ಅಧಿಕಾರಿಗಳು(ಬೀಜ)/ಆಸ್ತಿ ಅಧಿಕಾರಿಗಳು ಕೃವಿವಿ, ಧಾರವಾಡ

3 ಡೀನ್(ಸ್ನಾತಕೋತ್ತರ)/ ಡೀನ್ (ವಿ.ಕ)/ ಡೀನ್(ಕೃಷಿ), ಕೃಷಿ ಮಹಾವಿದ್ಯಾಲಯ, ಧಾರವಾಡ/ ವಿಜಯಪುರ/ ಹನುಮನಮಟ್ಟಿ / ಡೀನ್ (ಅರಣ್ಯ), ಅರಣ್ಯ ಮಹಾವಿದ್ಯಾಲಯ, ಶಿರಸಿ/ ಡೀನ್ (ಸವಿ), ಧಾರವಾಡ

4 ವಿಸ್ತರಣಾ ನಿರ್ದೇಶಕರು, ಕೃವಿವಿ, ಧಾರವಾಡ ಇವರ ಮಾಹಿತಿಗಾಗಿ ಹಾಗೂ ಈ ವಿಷಯವನ್ನು ಪ್ರಚಲಿತ ದಿನಪತ್ರಿಕೆಗಳಲ್ಲಿ ಪ್ರಕಟಿಸುವ ವ್ಯವಸ್ಥೆ ಮಾಡಲು ಕೋರಲಾಗಿದೆ.

5 ಗ್ರಂಥಪಾಲಕರು, ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಮಾಹಿತಿಗಾಗಿ ಮತ್ತು ಈ ವಿಷಯವನ್ನು ಕೃಷಿ ವಿಶ್ವವಿದ್ಯಾಲಯದ ಅಂತರ್ಜಾಲ ತಾಣದಲ್ಲಿ ಪ್ರಕಟಿಸಲು ಕೋರಲಾಗಿದೆ.

6 ಜಿಲ್ಲಾ ವಾರ್ತಾ ಮತ್ತು ಪ್ರಚಾರ ಅಧಿಕಾರಿಗಳು, ವಾರ್ತಾ ಮತ್ತು ಪ್ರಚಾರ ಇಲಾಖೆ, ಡಿ. ಸಿ. ಕೌಂಪೌಂಡ, ಧಾರವಾಡ ಇವರಿಗೆ ಮಾಹಿತಿಗಾಗಿ ಮತ್ತು ಹೆಚ್ಚಿನ ರೀತಿಯಲ್ಲಿ ಪ್ರಚಾರ ಮಾಡಲು ಕೋರಲಾಗಿದೆ.

7 ಜಂಟಿ ಕೃಷಿ ನಿರ್ದೇಶಕರು ಧಾರವಾಡ/ಬೆಳಗಾವಿ/ಹಾವೇರಿ/ಗದಗ/ಬಾಗಲಕೋಟ/ವಿಜಯಪುರ/ಉತ್ತರ ಕನ್ನಡ ಸದರಿ ವಿಷಯವನ್ನು ಎಲ್ಲರ ಸೂಕ್ತ ಮಾಹಿತಿಗಾಗಿ ಪ್ರಚಾರ ಮಾಡಲು ಕೋರಲಾಗಿದೆ

8 ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ/ ಗುಲ್ಬರ್ಗಾ, ವಿಶ್ವವಿದ್ಯಾಲಯ, ಗುಲ್ಬರ್ಗಾ/ಮೈಸೂರು ವಿಶ್ವವಿದ್ಯಾಲಯ, ಮೈಸೂರು/ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು/ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ/ ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು/ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ. ಇವರಿಗೆ ಮಾಹಿತಿಗಾಗಿ ಮತ್ತು ಸದರಿ ವಿಷಯವನ್ನು ಎಲ್ಲರ ಸೂಕ್ತ ಮಾಹಿತಿಗಾಗಿ ಪ್ರಚಾರ ಮಾಡಲು ಕೋರಲಾಗಿದೆ.

9 ಕುಲಸಚಿವರು, ಕೃಷಿ ವಿಶ್ವವಿದ್ಯಾಲಯ,ಬೆಂಗಳೂರು/ರಾಯಚೂರ/ಯು.ಎ.ಎಚ್.ಎಸ್.ಶಿವಮೊಗ್ಗಾ/ಯು.ಎಚ್.ಎಸ್. ಬಾಗಲಕೋಟ/ಕೆ.ವಿ.ಎ.ಎಫ್.ಎಸ್.ಯು, ಬೀದರ ಇವರಿಗೆ ಮಾಹಿತಿಗಾಗಿ ಮತ್ತು ಸದರಿ ವಿಷಯವನ್ನು ಎಲ್ಲರ ಸೂಕ್ತ ಮಾಹಿತಿಗಾಗಿ ಪ್ರಚಾರ ಮಾಡಲು ಕೋರಲಾಗಿದೆ.

**ಪ್ರತಿಯನ್ನು:** ಕಾರ್ಯದರ್ಶಿಗಳು, ಕುಲಪತಿಗಳ ಕಛೇರಿ, ಕೃವಿವಿ, ಧಾರವಾಡ ಇವರಿಗೆ ಈ ಮಾಹಿತಿಯನ್ನು ಮಾನ್ಯ ಕುಲಪತಿಗಳ ಗಮನಕ್ಕೆ ತರಲು ಕೋರಲಾಗಿದೆ.